## ಭೈಂದೂರು ಪುರಸಭೆಯಲ್ಲಿ ಪಡಿತರ ಚೀಟಿ ವಿತರಣೆ

473 ಶ್ರೀ ಜಿ.ಎಸ್. ಆಚಾರ್ (ಭೈಂದೂರು) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಭೈಂದೂರು ಪುರಸಭೆಯ ವ್ಯಾಪ್ತಿಯಲ್ಲಿ ಹಿಂದೆ ರೇಶನ್ ಕಾರ್ಡು ಇದ್ದವರಲ್ಲಿ ಕೆಲವರಿಗೆ ಹೊಸ ಕಾರ್ಡು ನೀಡಿಲ್ಲವೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಈ ಹಿಂದೆ ಕಾರ್ಡು ನೀಡಿದ್ದು ಆಯಾ ಮನೆಯ ನಿವಾಸಿಗಳು ಮತ ಚಲಾಯಿಸಿದ್ದು ವಾಸ್ತವದ ದಾಖಲೆ ಇದ್ದರೂ ಸಹಾ ಕಾರ್ಡು ನೀಡದಿರುವ ವಿಚಾರದಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ?

ಇ) ಕಾರ್ಡು ನೀಡಿಕೆಯಲ್ಲಿ ಸರ್ಕಾರದ ಸ್ಪಷ್ಟ ನೀತಿ ಏನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) ಈ ರೀತಿಯ ವಿಚಾರಗಳು ಭೈಂದೂರು ಪುರಸಭೆಯ ವ್ಯಾಪ್ತಿಯಲ್ಲಿ ಬಂದಿಲ್ಲದಿರುವುದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

ಆ) ಹಳೆ ಪಡಿತರ ಚೀಟಿಯ ಸ್ಥಾನದಲ್ಲಿ ಹೊಸ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಇ) ಗ್ರಾಮಾಂತರ ಪ್ರದೇಶ ಹಾಗೂ 20,000 ಕ್ಕಿಂತ ಕಡಿಮೆ ಜನಸಂಖ್ಯೆವುಳ್ಳ ಪಟ್ಟಣ ಪ್ರದೇಶದಲ್ಲಿ ವಾಸಿಸುವ ಯಾವುದೇ ಬಡ ಕುಟುಂಬದ ವಾರ್ಷಿಕ ಆದಾಯ 3,500 ಮತ್ತು ಅದಕ್ಕಿಂತ ಕಡಿಮೆ ಇದ್ದಲ್ಲಿ ಅಂತಹವರಿಗೆ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳ ಸರಬರಾಜು ಮಾಡಲು ಹಸಿರು ಕಾರ್ಡು ಸೌಲಭ್ಯ ಒದಗಿಸಲು ಸದರಿ ಸೌಲಭ್ಯ ದುರುಪಯೋಗವಾಗದಂತೆ ಕ್ರಮ ಜರುಗಿಸುವುದು ಕೂಡ ಸರ್ಕಾರದ ನೀತಿಯಾಗಿದೆ.

## ಸವದತ್ತಿ ತಾಲ್ಲೂಕಿನ ಇಂಚಲ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಿಸುವ ಬಗ್ಗೆ

545. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಇಂಚಲ ಗ್ರಾಮದಲ್ಲಿ ಪಿ.ಹೆಚ್.ಸಿ. ಸ್ಥಾಪಿಸುವ ಸಲುವಾಗಿ ಜನರು 25 ಸಾವಿರ ರೂ.ಗಳನ್ನು ಯಾವ ದಿನಾಂಕದಂದು ಸರ್ಕಾರಕ್ಕೆ ಹಣವನ್ನು (ಬ್ಯಾಂಕಿನಲ್ಲಿ) ತುಂಬಿದ್ದಾರೆ?

ಆ) ಊರಿನ ಜನರು ಅಲ್ಲಿ ನಾಲ್ಕು ಎಕರೆ ಜಮೀನನ್ನು ಪುಕ್ಕಟೆಯಾಗಿ ಆಸ್ಪತ್ರೆಯ ನಿರ್ಮಾಣದ ಸಲುವಾಗಿ ಕೊಡಲಾಗಿರುವ ಸಂಗತಿ ನಿಜವೇ?

ಇ) ಜಿಲ್ಲಾ ಪರಿಷತ್ತಿನ ಸರ್ವಸಾಮಾನ್ಯ ಸಭೆಯಲ್ಲಿ ಈ ಊರಿನಲ್ಲಿ ಒಂದು ಪಿ.ಹೆಚ್.ಸಿ. ಸೆಂಟರನ್ನು ಕಟ್ಟಬೇಕೆಂದು ನಿರ್ಣಯಿಸಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ? ಮತ್ತು ಈ ನಿರ್ಣಯವನ್ನು ಜಿಲ್ಲಾಪರಿಷತ್ತಿನ ಸರ್ವಸಾಮಾನ್ಯ ಸಭೆಯಲ್ಲಿ ಯಾವ ದಿನಾಂಕದಂದು ತೆಗೆದುಕೊಳ್ಳಲಾಯಿತು?

ಈ) ಈ ಗ್ರಾಮದಲ್ಲಿ ಪಿ.ಹೆಚ್.ಸಿ. ಸೆಂಟರ್ ಸ್ಥಾಪಿಸಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯವರು):–

ಅ) ಇಲ್ಲ, ಸವದತ್ತಿ ತಾಲ್ಲೂಕಿನ ಇಂಚಲ ಗ್ರಾಮದ ಜನರು ದಿನಾಂಕ 12–11–1985ರಂದು ಪ್ರಾಥಮಿಕ ಆರೋಗ್ಯ ಘಟಕದ ಮಂಜೂರಾತಿಗಾಗಿ ರೂ. 25,000ಗಳನ್ನು ಬೈಲಹೊಂಗಲದ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟಿರುತ್ತಾರೆ.